# OCTOBER 16, 2026

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಉಪ ರಾಷ್ಟ್ರಪತಿ, ಸಿ.ಪಿ.ರಾಧಾಕೃಷ್ಣನ್,** ಇಂದು ಕಾರವಾರಕ್ಕೆ: ಸ್ವದೇಶಿ ನಿರ್ಮಿತ, 'ಸಮರ್ಥಕ್' ನೌಕೆ, ಲೋಕಾರ್ಪಣೆ.
- **ರಾಜ್ಯದ ನೂತನ ರಾಜ್ಯಪಾಲರಾಗಿ,** ಡಾಕ್ಟರ್ ಸುಧಾ ಯಾದವ, ಇಂದು ಪ್ರಮಾಣವಚನ ಸ್ವೀಕಾರ.
- **ಬಳ್ಳಾರಿ ಜಿಲ್ಲೆಯಲ್ಲಿ,** ಕೃತಕ ಬುದ್ಧಿಮತ್ತೆ ಆಧಾರಿತ, ಗರ್ಭಿಣಿ ಆರೋಗ್ಯ ಮೇಲ್ವಿಚಾರಣೆ.
- **ಆಹಾರ ಸುರಕ್ಷತಾ ನಿಯಮ ಕಡ್ಡಾಯ ಪಾಲನೆ;** ರಾಜ್ಯಾದ್ಯಂತ ನಿಯಮಿತ ತಪಾಸಣೆ.

<><><>

**ಈಗ ವಾರ್ತೆಗಳ ವಿವರ**

<><><>

**ಭಾರತೀಯ ನೌಕಾ ಪಡೆಯ,** ಮೊದಲ ಸ್ವದೇಶಿ ನಿರ್ಮಿತ, ಬಹೋಪಯೋಗಿ ನೌಕೆ, 'ಸಮರ್ಥಕ್' ಇಂದು, ಉತ್ತರಕನ್ನಡ ಜಿಲ್ಲೆ, ಕಾರವಾರದ ಕದಂಬ ನೌಕಾನೆಲೆಯಲ್ಲಿ, ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರ ಉಪಸ್ಥಿತಿಯಲ್ಲಿ, ಸೇವಾರ್ಪಣಗೊಳ್ಳಲಿದೆ. 'ಮೇಕ್ ಇನ್ ಇಂಡಿಯಾ' ಉಪಕ್ರಮದಡಿ, ತಮಿಳುನಾಡಿನ ಕಟ್ಟುಪಳ್ಳಿ ಶಿಪ್‌ಯಾರ್ಡ್‌ನಲ್ಲಿ 'ಸಮರ್ಥಕ್' ನೌಕೆ ನಿರ್ಮಾಣಗೊಂಡಿದೆ. 107 ಮೀಟರ್ ಉದ್ದ ಹಾಗೂ 18 ದಶಾಂಶ 6 ಮೀಟರ್ ಅಗಲ, 3 ಸಾವಿರದ 750 ಟನ್‌ಗಿಂತ ಹೆಚ್ಚಿನ ಭಾರವಾಹಕ ಸಾಮರ್ಥ್ಯ ಹೊಂದಿದೆ. ಈ ನೌಕೆ, ಪ್ರತಿ ಗಂಟೆಗೆ, ಗರಿಷ್ಟ 15 ನಾಟಿಕಲ್ ಮೈಲ್ಸ್ ವೇಗದಲ್ಲಿ ಕ್ರಮಿಸಬಲ್ಲದು.

<><><>

**ರಾಜ್ಯದ ನೂತನ ರಾಜ್ಯಪಾಲರಾಗಿ ನಿಯೋಜಿತ,** ಹರಿಯಾಣ ಮೂಲದ, ಡಾಕ್ಟರ್ ಸುಧಾ ಯಾದವ, ಲೋಕ ಭವನದಲ್ಲಿ, ಇಂದು ಬೆಳಗ್ಗೆ 10 ಗಂಟೆಗೆ, ಪ್ರಮಾಣವಚನ ಸ್ವೀಕರಿಸಲಿದ್ದಾರೆ. ನೂತನ ರಾಜ್ಯಪಾಲರಿಗೆ, ರಾಜ್ಯ ಉಚ್ಚ ನ್ಯಾಯಾಲಯದ, ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, ಪ್ರಮಾಣವಚನ ಬೋಧಿಸಲಿದ್ದಾರೆ. ಮುಖ್ಯಮಂತ್ರಿ ಸೇರಿದಂತೆ, ಸಂಪುಟದ ಸಚಿವರು, ವಿಶೇಷ ಆಹ್ವಾನಿತ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

**ನಾಡಹಬ್ಬ ಮೈಸೂರು ದಸರಾ ಮಹೋತ್ಸವದ** ಅಂಗವಾಗಿ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಹಾಗೂ ಪ್ರವಾಸೋದ್ಯಮ ಇಲಾಖೆ ವತಿಯಿಂದ, ಮೈಸೂರಿನ ಐತಿಹಾಸಿಕ ಪರಂಪರೆಯನ್ನು ಪರಿಚಯಿಸುವ ಉದ್ದೇಶದಿಂದ, ರಂಗಾಚಾರ್ಲು ಪುರಭವನದ ಆವರಣದಲ್ಲಿ 'ಪಾರಂಪರಿಕ ನಡಿಗೆ' ಕಾರ್ಯಕ್ರಮ, ಜರುಗಿತು. ಖ್ಯಾತ ನಟ, ನಿರ್ದೇಶಕ, ಬಿ. ಸುರೇಶ ಚಾಲನೆ ನೀಡಿದರು. ಮೈಸೂರಿನ ಐತಿಹಾಸಿಕ ಕಟ್ಟಡಗಳು, ಅವುಗಳ ವಾಸ್ತುಶಿಲ್ಪ ಹಾಗೂ ಸಾಂಸ್ಕೃತಿಕ ಹಿನ್ನೆಲೆಯನ್ನು ಪರಿಚಯಿಸುವ, ನಡಿಗೆಯ ಮೂಲಕ, ನಗರದ ಶ್ರೀಮಂತ ಪರಂಪರೆಯನ್ನು ಉಳಿಸಿ ಬೆಳೆಸುವ ಸಂದೇಶ, ಪಾರಂಪರಿಕ ನಡಿಗೆ ಸಾರಿತು.

<><><>

**ಬಳ್ಳಾರಿ ಜಿಲ್ಲೆಯಲ್ಲಿ, ಕಳೆದ 2 ವರ್ಷಗಳಲ್ಲಿ,** 48 ಬಾಣಂತಿಯರ ಸಾವು ಸಂಭವಿಸಿದೆ. ಇದನ್ನು ತಡೆಗಟ್ಟಲು, ಪೋಷಕಾಂಶ ಕೊರತೆ ಹಾಗೂ ರಕ್ತಹೀನತೆಯಿಂದ ಬಳಲುವ, ಗರ್ಭಿಣಿಯರ ಆರೋಗ್ಯವನ್ನು, ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಸಹಾಯದಿಂದ, ಎ.ಐ. ಟ್ರ್ಯಾಕರ್ ಮೂಲಕ, ನಿರ್ವಹಿಸಿದ ಹಿನ್ನೆಲೆ, ಬಾಣಂತಿಯರ ಸಾವಿನ ಪ್ರಮಾಣ, ನಾಲ್ಕಕ್ಕೆ ಇಳಿಕೆಯಾಗಿದೆ ಎಂದು, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಮಹಮ್ಮದ್ ಹಾರೀಸ್ ಸುಮೇರ್ ತಿಳಿಸಿದ್ದಾರೆ. ಬಳ್ಳಾರಿಯ, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ವಿಜನ್ ಡಿಜಿಟಲ್ ಇಂಡಿಯಾ ಅಡಿ ಆಯೋಜಿತ, 'ಶೈಕ್ಷಣಿಕ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ; ಬಹುಶಿಸ್ತೀಯ ಶಿಕ್ಷಣ, ಸಂಶೋಧನೆ ಮತ್ತು ನಾವಿನ್ಯತೆ' ಎಂಬ ವಿಷಯದ, ಎರಡು ದಿನಗಳ, ಅಂತಾರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ, ಮಾತನಾಡಿದರು. ಅಮೆರಿಕ ಹಾಗೂ ಫಿನ್‌ಲ್ಯಾಂಡ್ ದೇಶಗಳ, ಎ.ಐ. ಪರಿಣಿತರು, ಮಾರ್ಗದರ್ಶನ ನೀಡಲಿದ್ದಾರೆ.

<><><>

**ಧಾರವಾಡದ ಟ್ರಿಪ್ಲ್ ಐಟಿ** – ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ– ಇಸ್ರೋ, ಅಹ್ಮದಾಬಾದ್‌ನಲ್ಲಿ ಆಯೋಜಿಸಿದ್ದ, ರಾಷ್ಟ್ರ ಮಟ್ಟದ ಇಸ್ರೋ ರೋಬೋಟಿಕ್ಸ್ ಚಾಲೆಂಜ್–2026 ಸ್ಪರ್ಧೆಯಲ್ಲಿ, 2 ಲಕ್ಷ ರೂಪಾಯಿ ಬಹುಮಾನದೊಂದಿಗೆ, 4ನೇ ಸ್ಥಾನ ಪಡೆದಿದೆ. ಟೀಮ್ ಇಕ್ಯಾರಸ್ ಸದಸ್ಯರಾದ, ಜೈಶಲ್ ಪಟೇಲ್, ಸಕ್ಷಮ್ ಗುಪ್ತಾ, ಅಶ್ವಿನ್ ಜೋಸೆಫ್ ಸೇರಿದಂತೆ, 7 ಜನ ವಿದ್ಯಾರ್ಥಿಗಳಿಗೆ, ವೃತ್ತಿನಿರತ ಕ್ಷೇತ್ರ ಪ್ರಾಧ್ಯಾಪಕ, ಮಲ್ಲಿಕಾರ್ಜುನ ಕಂಡೆ, ಮಾರ್ಗದರ್ಶಕರಾಗಿದ್ದರು. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಅವರು ಮಾಹಿತಿ ನೀಡಿದ್ದಾರೆ.

<><><>

**ಪ್ರೊ. ಮಲ್ಲಿಕಾರ್ಜುನ ಕಂಡೆ 60 ಧ್ವನಿ ಸೆಕೆಂದುಗಳು**

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಸಿಹಿ ತಿಂಡಿಗಳ ತಯಾರಿಕಾ ಘಟಕಗಳು** ಹಾಗೂ ಮಾರಾಟ ಮಳಿಗೆಗಳಲ್ಲಿ, ಕೃತಕ ಬಣ್ಣಗಳ ಬಳಕೆ, ಕಲಬೆರಕೆ ಸೇರಿದಂತೆ, ಆಹಾರ ಸುರಕ್ಷತಾ ನಿಯಮಗಳ ಉಲ್ಲಂಘನೆ ತಡೆಯಲು, ನಿಯಮಿತ ತಪಾಸಣೆ ನಡೆಸಲಾಗುವುದು ಎಂದು, ಆರೋಗ್ಯ ಖಾತೆ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಹಬ್ಬದ ಸಂದರ್ಭದಲ್ಲಿ, ಸಿಹಿ ತಿಂಡಿಗಳಿಗೆ ಬೇಡಿಕೆ

ಹೆಚ್ಚಲಿದ್ದು, ಗುಣಮಟ್ಟ ಮತ್ತು ಸುರಕ್ಷತೆಯ ಬಗ್ಗೆ, ಹೆಚ್ಚಿನ ನಿಗಾ ವಹಿಸುವ ಅಗತ್ಯವಿದೆ ಎಂದರು. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ, ಸಿಹಿ ತಿಂಡಿಗಳ ತಯಾರಿಕೆ ಹಾಗೂ ಮಾರಾಟದಲ್ಲಿ, ನಿಗದಿತ ಆಹಾರ ಸುರಕ್ಷತಾ ಮಾನದಂಡಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸಚಿವ ಖಾದರ್, ಹೇಳಿದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು,** ಸಾರ್ವಜನಿಕ ಸೇವೆಯಲ್ಲಿ, ಸಾರ್ಥಕ 25 ವ ´ಗಳನ್ನು ಪೂರ್ಣಗೊಳಿಸಿದ್ದಾರೆ. ತನ್ನಿಮಿತ್ತ, ‘ಜನ ಸೇವೆಯಿಂದ ದೇಶ ಸೇವೆ’ ಎಂಬ, ಧ್ಯೇಯದೊಂದಿಗೆ ಕೈಗೊಳ್ಳಲಾದ ಮಾಸಿಕ ಅಭಿಯಾನ, ನಾಳೆಗೆ ಸಂಪನ್ನಗೊಳ್ಳಲಿದೆ. ಸೇವೆ ಮತ್ತು ಸುಶಾಸನದಿಂದ ಪ್ರೇರಿತ, ಕೇಂದ್ರ ಸರ್ಕಾರ, 2047ರ ವೇಳೆಗೆ, ‘ವಿಕಸಿತ ಭಾರತ’ದ ಗುರಿ ಸಾಧನೆಗೆ, ನಿರಂತರ ಶ್ರಮಿಸುತ್ತಿದೆ. ತಲಸ್ಪರ್ಷಿ ಅಭಿವೃದ್ಧಿ ಮತ್ತು ಸಾಮಾಜಿಕ ಸಬಲೀಕರಣದ ಈ ಬದ್ಧತೆ, ಜನರ ಜೀವನದಲ್ಲಿ ಪರಿವರ್ತನೆ ತರುತ್ತಿದೆ.

ಆಕಾಶವಾಣಿಯ ವಿಶೇ ´ ಸರಣಿಯಲ್ಲಿ, ಇಂದು, ‘ವಂದೇ ಭಾರತ ರೈಲು ಯೋಜನೆ’ ಕುರಿತು, ಒಂದು ನೋಟ..

**ಆಮದು ತಂತ್ರಜ್ಞಾನದಿಂದ,** ಸ್ವದೇಶಿ ಆವಿ ್ಕರದತ್ತ, ವಂದೇ ಭಾರತ ರೈಲು ಯೋಜನೆ, ಮಹತ್ವದ ಮೈಲಿಗಲ್ಲಾಗಿ ಹೊರಹೊಮ್ಮಿದೆ. ಈ ಪರಿವರ್ತನೆಯ ಹಿಂದೆ, ವಿಶಾಲವಾದ ಸಾಮಾಜಿಕ ಆಶಯವಿದೆ. ಹೀಗಾಗಿ, ವಂದೇ ಭಾರತ ರೈಲು, ತಂತ್ರಜ್ಞಾನದ ಮಹತ್ವಾಕಾಂಕ್ಷೆ ಮತ್ತು ಜನಸಾಮಾನ್ಯರ ಅನುಕೂಲ - ಇವೆರಡರ ಸಂಗಮವಾಗಿದೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ನೈಋತ್ಯ ರೇಲ್ವೆ, ಹುಬ್ಬಳ್ಳಿ ವಿಭಾಗದ, ಹಿರಿಯ ವಾಣಿಜ್ಯ ವ್ಯವಸ್ಥಾಪಕ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ, ಡಾಕ್ಟರ್ ಕಾರ್ತಿಕ ವಿ. ಹೆಗಡೆಕಟ್ಟಿ.

<><><>

**ಡಾಕ್ಟರ್ ಕಾರ್ತಿಕ ವಿ. ಹೆಗಡೆಕಟ್ಟಿ ಧ್ವನಿ 72 ಸೆಕೆಂದುಗಳು**

<><><>

**“ಇಂದು ನಾವೀನ್ಯತೆ; ನಾಳೆಗೆ ಪೋ ´ಣೆ”** ಎಂಬ ಧ್ಯೇಯದೊಂದಿಗೆ, ವಿಶ್ವಸಂಸ್ಥೆಯ ‘ಆಹಾರ ಮತ್ತು ಕೃಷಿ ಸಂಸ್ಥೆ’, ಇಂದು ವಿಶ್ವ ಆಹಾರ ದಿನಾಚರಣೆಗೆ, ಕರೆ ನೀಡಿದೆ. ಹಸಿವು ಮತ್ತು ಆಹಾರ ಭದ್ರತೆಗೆ ಸಂಬಂಧಿಸಿದ. ‘ವಿಶ್ವ ಆಹಾರ ಕಾರ್ಯಕ್ರಮ’, ‘ವಿಶ್ವ ಆರೋಗ್ಯ ಸಂಸ್ಥೆ’ ಮತ್ತು ‘ಅಂತಾರಾಷ್ಟ್ರೀಯ ಕೃಷಿ ಅಭಿವೃದ್ಧಿ ನಿಧಿ’ ಸೇರಿದಂತೆ, ಅನೇಕ ಸಂಸ್ಥೆಗಳ ಸಹಭಾಗಿತ್ವದಲ್ಲಿ, ವಿಶ್ವ ಆಹಾರ ದಿನವನ್ನು ಆಚರಿಸಲಾಗುತ್ತಿದೆ. ಯುದ್ಧ ಹಾಗೂ ಸಂಘ ´ದ ಸಮಯದಲ್ಲಿ, ಹಸಿವನ್ನು ಒಂದು ಆಯುಧವಾಗಿ ಬಳಸದಂತೆ ಯೋಜಿಸಿದ್ದಕ್ಕಾಗಿ, ‘ವಿಶ್ವ ಆಹಾರ ಕಾರ್ಯಕ್ರಮ’ 2020ನೇ ಸಾಲಿನ, ನೊಬೆಲ್ ಶಾಂತಿ ಪುರಸ್ಕಾರಕ್ಕೆ, ಭಾಜನವಾಗಿದೆ.

<><><>

**ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ** ಅವರು, ಉಡುಪಿ ಜಿಲ್ಲೆ, ಕಾಪುವಿನ ಶ್ರೀ ಕ್ಷೇತ್ರ, ಉಚ್ಚಿಲದ ಮಹಾಲಕ್ಷ್ಮಿ ದೇವಸ್ಥಾನದಲ್ಲಿ, ಮಹಿಳಾ ದಸರಾಕ್ಕೆ, ಚಾಲನೆ ನೀಡಿದರು. ಉಚ್ಚಿಲ ಹುಲಿವೇ ´ ಆಚರಣೆಯ ಭಿತ್ತಿಚಿತ್ರವನ್ನು ಅವರು, ಅನಾವರಣಗೊಳಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಉಪ ರಾಷ್ಟ್ರಪತಿ, ಸಿ.ಪಿ.ರಾಧಾಕೃ ್ಣನ್,** ಇಂದು ಕಾರವಾರಕ್ಕೆ; ಸ್ವದೇಶಿ ನಿರ್ಮಿತ, ‘ಸಮರ್ಥಕ್’ ನೌಕೆ, ಲೋಕಾರ್ಪಣೆ.

- **ರಾಜ್ಯದ ನೂತನ ರಾಜ್ಯಪಾಲರಾಗಿ,** ಡಾಕ್ಟರ್ ಸುಧಾ ಯಾದವ, ಇಂದು ಪ್ರಮಾಣವಚನ ಸ್ವೀಕಾರ.
- **ಬಳ್ಳಾರಿ ಜಿಲ್ಲೆಯಲ್ಲಿ,** ಕೃತಕ ಬುದ್ಧಿಮತ್ತೆ ಆಧಾರಿತ, ಗರ್ಭಿಣಿ ಆರೋಗ್ಯ ಮೇಲ್ವಿಚಾರಣೆ.
- **ಆಹಾರ ಸುರಕ್ಷತಾ ನಿಯಮ ಕಡ್ಡಾಯ ಪಾಲನೆ;** ರಾಜ್ಯಾದ್ಯಂತ ನಿಯಮಿತ ತಪಾಸಣೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>